ವಿಷಯ:ರೇಷ್ಮೆ ಬೆಳೆಗಾರರಿಗೆ ರೋಗದಿಂದ ಕೂಡಿದ ಬಿತ್ತನೆ ಸರಬರಾಜು ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1388 (2203)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಉತ್ಪಾದನೆಯಾದ ರೇಷ್ಮೆ ? (ವರ್ಷವಾರು ಮತ್ತು ಜಿಲ್ಲಾವಾರು ವಿವರ ಒದಗಿಸುವುದು)

ಆ) ರೇಷ್ಮೆ ಬಿತ್ತನೆ ಕೋಠಿಗಳಿಂದ ರೋಗ ರಹಿತ ಬಿತ್ತನೆ ಮೊಟ್ಟೆಗಳ ಸರಬರಾಜಿಲ್ಲದ ರೇಷ್ಮೆ ಉತ್ಪಾದನೆಯು ಶೇ. 50 ರಿಂದ 60 ರಷ್ಟು ಕಡಿಮೆಯಾಗಿರುವುದು ಗಮನಕ್ಕೆ ಬಂದಿದೆಯೆ ?

ಇ) ಬಿತ್ತನೆ ಪ್ರದೇಶಗಳಲ್ಲಿ ಉತ್ಪಾದಿಸುವ ಬಿತ್ತನೆ ಗೂಡುಗಳ ಮೇಲೆ ನಿಯಂತ್ರಣವಿದೆಯೇ ?

ಈ) ರೋಗರಹಿತ ಬಿತ್ತನೆ ಗೂಡುಗಳನ್ನು ಉತ್ಪಾದಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು)

ಅ) ಅನುಬಂಧ 'ಅ'ದಲ್ಲಿ ವಿವರ ಒದಗಿಸಿದೆ.

ಆ) ರೋಗರಹಿತ ಬಿತ್ತನೆ ಮೊಟ್ಟೆಗಳನ್ನು ಒದಗಿಸಲಾಗುತ್ತಿದೆ. ವಾತಾವರಣ ವೈಪರೀತ್ಯದಿಂದ, ಸುಣ್ಣಕಟ್ಟು, ಸಪ್ಪೆ, ಹಾಲು ಮತ್ತು ಗಂಟು ರೋಗಗಳಿಂದ ಕೆಲವೊಂದು ಬೆಳೆಗಳು ಕೆಟ್ಟಿರುವುದರಿಂದ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ರೇಷ್ಮೆ ಉತ್ಪಾದನೆ ಅಂದಾಜು ಶೇ 10.8ರಷ್ಟು ಕಡಿಮೆಯಾಗಿದೆ.

ಇ) ಹೌದು

ಈ) ಗಂಟು ರೋಗವನ್ನು ತಡೆಯಲು ಅನುಸರಿಸುತ್ತಿರುವ ಕ್ರಮಗಳನ್ನು ತೀವ್ರಗೊಳಿಸಲಾಗಿದೆ. ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಬಿತ್ತನೆ ವಲಯದಲ್ಲಿ ಹುಳು ಸಾಕಣೆ ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣದಿಂದ ಪ್ರತಿ ಬೆಳೆಯ ನಂತರ ಮತ್ತು ಬೆಳಗಿನ ಮುನ್ನ ಸಿಂಪಡಿಸಲಾಗುತ್ತದೆ. ಮಾರುಕಟ್ಟೆಗೆ ಬಂದ ಗೂಡುಗಳನ್ನು ಪರೀಕ್ಷಿಸಿ ಗಂಟು ರೋಗಕಣಗಳು ಕಾಣ ಬಂದರೆ ಆ ಗೂಡನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ತೀರ್ಮಾನಿಸಲಾಗುತ್ತದೆ. ಬಿತ್ತನೆ ಗೂಡನ್ನು ಉತ್ಪನ್ನ ಮಾಡುವಾಗ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಿ ಸೆಲ್ಯೂಲಾರ್ ಸಾಗಾಣಿಕೆ ಕ್ರಮವನ್ನು ಅನುಸರಿಸಲಾಗುತ್ತಿದೆ ಮತ್ತು ಪ್ರತಿ ರೈತರು ಹುಳು ಸಾಕಾಣೆ ಕ್ರಮವನ್ನು ವೀಕ್ಷಿಸಿ ಆಚರಣೆಗೆ ತರಲು ವ್ಯವಸ್ಥೆ ಮಾಡಲಾಗಿದೆ. ಮಿಶ್ರತಳಿ ಪ್ರದೇಶದಲ್ಲಿ ಗಂಟುರೋಗವನ್ನು ತಡೆಗಟ್ಟಲು ಪ್ರತಿ ಬೆಳೆಯಾದ ನಂತರ ಎಲ್ಲಾ ರೇಷ್ಮೆ ಬೆಳೆಗಾರರು ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣ ಸಿಂಪರಣೆ ಮಾಡಲಾಗುತ್ತಿದೆ. ಒಂದು ಪಂಗಡದಲ್ಲಿ ತಯಾರಾದ ಮೊಟ್ಟೆಗಳನ್ನು ಬಿತ್ತನೆ ಬೆಳೆಗಾರರಿಗೆ ವಿತರಣೆ ಮಾಡಿ ಅದರ ಸಾಕಾಣಿಕೆಯಲ್ಲಿ ಯಾವುದೇ ಬಿತ್ತನೆ ಬೆಳೆಗಾರರ ಬೆಳೆಯಲ್ಲಿ ಗಂಟುರೋಗ ಕಾಣಬಂದರೆ ಆ ಪಂಗಡದ ಎಲ್ಲಾ ಬೆಳೆಗಳನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ನೂಲು ಬಿಚ್ಚಾಣಿಕೆಗೆ ಕೊಡಲಾಗುತ್ತಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಉತ್ಪಾದನೆಯಾದ ರೇಷ್ಮೆಯ ಜಿಲ್ಲಾವಾರು ವಿವರ
(ಉತ್ಪಾದನೆ : ಮೆಟ್ರಿಕ್ ಟನ್‌ಗಳಲ್ಲಿ)

ಕ್ರ.ಸಂ.	ಜಿಲ್ಲೆ	1988-89	1989-90	1990-91	1991-92(ಫೆಬ್ರವರಿ 92ರ ಅಂತ್ಯದವರೆಗೆ)
1	ಬೆಂಗಳೂರು ನಗರ ಜಿಲ್ಲೆ	67	135	151	108
2	ಬೆಂಗಳೂರು ಗ್ರಾಮಾಂತರ	1168	1252	1251	1079
3	ಬೆಳಗಾಂ	13	28	29	23
4	ಬಳ್ಳಾರಿ	25	28	29	25
5	ಬೀದರ್	3	6	6	5
6	ವಿಜಾಪುರ	19	33	35	20
7	ಚಿಕ್ಕಮಗಳೂರು	8	12	20	18
8	ಚಿತ್ರದುರ್ಗ	81	96	127	114
9	ದಕ್ಷಿಣ ಕನ್ನಡ	11	15	17	15
10	ಧಾರವಾಡ	25	29	32	24
11	ಗುಲ್ಬರ್ಗಾ	18	36	37	23
12	ಹಾಸನ	45	71	93	101
13	ಕೊಡಗು	6	8	9	7
14	ಕೋಲಾರ	1344	1564	1542	1394
15	ಮಂಡ್ಯ	769	830	830	540
16	ಮೈಸೂರು	1375	1478	1485	1100
17	ರಾಯಚೂರು	7	13	18	13
18	ಶಿವಮೊಗ್ಗ	14	14	14	11
19	ತುಮಕೂರು	306	419	430	366
20	ಉತ್ತರ ಕನ್ನಡ	8	9	9	7
	ಒಟ್ಟು	5317	6076	6214	4993

ವಿಷಯ:ಚಾಮರಾಜನಗರ ತಾಲ್ಲೂಕು ಜೋತಿಗೊಂಡನಪುರದಲ್ಲಿ ಕರಿಕಲ್ಲು ಕ್ವಾರಿಯ ಕೆಲಸ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1389 (2243)

ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಚಾಮರಾಜನಗರ ತಾಲ್ಲೂಕು ಜೋತಿಗೊಂಡನಪುರದ ಸರ್ವೆ ನಂ. 184 ರಲ್ಲಿ 248.16